ಈ) ರಾಜ್ಯದಲ್ಲಿ ಶಾಶ್ವತ ಪಡಿತರ ಚೀಟಿ ನೀಡಲು ಸರ್ಕಾರ ನಿಗಧಿಪಡಿಸಿರುವ ಸಮಯವೆಷ್ಟು?

ನಿಗದಿಪಡಿಸಿರುವುದಿಲ್ಲ ಆದರೆ, ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಟ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** **1258(1412)**

**ಸದಸ್ಯರ ಹೆಸರು** **ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)**

**ಉತ್ತರಿಸಬೇಕಾದ ಸಚಿವರು** **ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಲು ಸರ್ಕಾರ ನಿರ್ಧರಿಸಿರುವುದು ನಿಜವೇ? ಹಾಗಿದ್ದಲ್ಲಿ ಮನ್ನಾ ಮಾಡಲು ಉದ್ದೇಶಿಸಿರುವ ಒಟ್ಟು ಸಾಲದ ಮೊತ್ತ ಎಷ್ಟು?

ಆ) ರೈತರ ಯಾವ ಯಾವ ಸಾಲ ಮನ್ನಾ ಮಾಡಲಾಗುವುದು? ಸರ್ಕಾರ ಇದಕ್ಕೆ ಮಾರ್ಗಸೂಚಿಯನ್ನೇನಾದರೂ ನಿಗದಿಪಡಿಸಿದೆಯೇ?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01 04 2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31 12 2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ ಈ ಸಂಬಂಧದಲ್ಲಿ ವಿವರವಾದ ಸರ್ಕಾರಿ ಆದೇಶವನ್ನು ಸದ್ಯದಲ್ಲೇ ಹೊರಡಿಸಲಾಗುವುದು

ಇ) ಸಾಲ ಮನ್ನಾ ಮಾಡಲು ಸಂಪನ್ಮೂಲವನ್ನು ಯಾವ ಮೂಲದಿಂದ ಕ್ರೋಢೀಕರಿಸುವುದು?

ಮೇಲೆ ತಿಳಿಸಿದಂತೆ ಮನ್ನಾ ಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ